CC 500/23    PW4

ದಿನಾಂಕ 28.08.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು : ಆರೋಪಿ ಪರಃ ಶ್ರೀ ವಕೀಲರಿಂದ: ಎಸ್ ಕೆ ವಕೀಲರಿಂದಃ

ನಾವು ಕಳುವಾಗಿದೆ ಎನ್ನುವ ಸ್ಥಳಕ್ಕೆ ಹೋದಾಗ ಅಲ್ಲಿ ಸುಮಾರು 7-8 ಜನರು ಇದ್ದರು. ಚಾಸಾ-1/ಉಷಾ ರವರ ಮನೆಯ ಪಕ್ಕದಲ್ಲಿ 5-6 ಮನೆಗಳು ಇವೆ. ಈ

ದಿನ ನಮ್ಮೊಂದಿಗೆ ಚಾಸಾ-1 ರವರ ಗಂಡ ಚಾಸಾ-2 ರವರು ನ್ಯಾಯಾಲಯಕ್ಕೆ ಬಂದಿರುತ್ತಾರೆ. ಚಾಸಾ-1/ಉಷಾ, ಚಾಸಾ-3 ವೀಣಾ , ಚಾಸಾ-5 ಸುನೀತಾ ಹಾಗೂ ನಾವು ಅನ್ಯೋನ್ಯವಾಗಿದ್ದೇವೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟನೆ ಆಗಿದೆ ಎಂದು ಹೇಳುವ ದಿನ 2 ನೇ ಆರೋಪಿ ಶೀಬಾ ರವರ ಗಂಡ ನಮ್ಮ ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಳುವಾಗಿದೆ ಎಂದು ಹೇಳುವ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಯಾಗಿದೆ ಎಂದು ಹೇಳುವ ದಿನ 2 ನೇ ಆರೋಪಿಯು ಅವರ ತಾಯಿ ಕ್ಯಾನ್ಸರ್ ಚಿಕಿತ್ಸೆಯ ಸಲುವಾಗಿ ಮಂಗಳೂರಿನ ಫಾದರ್ ಮುಲ್ಲ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ಸೊಸೈಟಿಯಲ್ಲಿ ಅವ್ಯವಹಾರ ಮಾಡಿ ನನ್ನನ್ನು ಸಂಸ್ಥೆಯಿಂದ ಉಚ್ಚಾಟನೆ ಮಾಡಿರುವ ಕಾರಣಕ್ಕೆ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1/ಉಷಾ, ಚಾಸಾ-3 ವೀಣಾ , ಚಾಸಾ-5 ಸುನೀತಾ ಹಾಗೂ ನನಗೆ 2 ನೇ ಆರೋಪಿಯ ವಿರುದ್ಧ ವೈಷಮ್ಯ ಇರುವುದರಿಂದ ಅವರೊಂದಿಗೆ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಕಳ್ಳತನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ